ತೆಗೆಯುತ್ತಿದ್ದ. ಹೀಗೆ ಹತ್ತಾರು ಬಿಲಗಳಿಗೆ ಕೈ ಹಾಕಿದರೂ ಅಂದು ಅವನ ನಿರೀಕ್ಷೆಯಂತೆ ಇಲಿಗಳು ಸಿಗದಿರುವುದು ಅವನ ಬೇಸರಿಕೆಗೆ ಕಾರಣವಾಗಿತ್ತು. ಎಷ್ಟು ಮಳೆ ಬಂದರೇನು ಇಲಿ ಹೊರ ಬರದ ಮೇಲೆ ಮಳೆಯ ಪ್ರಮಾಣ ಕಡಿಮೆ ಎಂದು ಹವಾಮಾನ ಇಲಾಖೆಯವರು ಹೇಳುವಂತೆ ಲೆಕ್ಕಾಚಾರದಲ್ಲಿ ಹೇಳುತ್ತಿದ್ದ.

ಈ ಇಲಿಯ ಬೇಟೆಯಾಡುವುದೆಂದರೆ ನಮ್ಮ ಕಡೆ ಸಲೀಸು. ಬಡತನದ ಬೇಗೆಯಲ್ಲಿ ಬೇಯುತ್ತಿದ್ದ ಜನರಿಗೆ ಪ್ರಾಣಿಗಳ ಬಾಡು ದುಬಾರಿ ಎಂತಲೂ, ಕಾಡು ಮಿಕಗಳಲ್ಲಿ ಅದೇನೇನೋ ಔಷಧಿ ಗುಣಗಳಿವೆ ಎಂತಲೂ ಪೂರ್ವದಿಂದಲೂ ನಂಬಿದ್ದರು. ಕಾಡು ಮೇಡುಗಳ ಮಿಕದ ಬಾಡು ರುಚಿಯಾಗಿರುತ್ತದೆಂದು ತನ್ನ ನಾಲಗೆಯ ಹಂಬಲವನ್ನು ಹೀಗೆ ತೀರಿಸಿಕೊಳ್ಳುವ ಪರಿಯ ಮೋಹವು ಮಾತ್ರ ಹೇಳತೀರದು. ಇಲಿ, ಮೊಲ, ಹಕ್ಕಿ, ಗೌಜಲಕ್ಕಿ, ಕಾಡು ಬೆಕ್ಕು, ಕೇರೆ ಹಾವು, ಕಾಡು ಹಂದಿ, ಉಡ ಇವುಗಳ ಮಾಂಸದ ರುಚಿಯನ್ನು ತಿಂದವರು ಬಹಳ ರಸವತ್ತಾಗಿ ವರ್ಣಿಸುವ ಪರಿ ನೋಡಿದರೆ ತಿನ್ನದವನೂ ತಿನ್ನಬೇಕು ಎಂದು ರುಚಿ ಹುಟ್ಟಿಸುವಷ್ಟು ಆಸೆ ಹುಟ್ಟುತ್ತದೆ. ಇಲಿಯ ಬಾಡು ರುಚಿಯೋ ರುಚಿ ಎಂದು ತನ್ನ ಗತಕಾಲದ ನೆನಪುಗಳನ್ನು ಈಗಲೂ ಮೆಲುಕು ಹಾಕುವ ಅಜ್ಜರಿದ್ದಾರೆ. ಬಾಡಿನ ರೇಟು ಏರುತ್ತಿದ್ದರೂ ಇಲಿಯ ಬೇಟೆಯಿಂದಲೇ ತನ್ನ ನಾಲಗೆ ರುಚಿಯನ್ನು ಸಮಗೊಳಿಸಿಕೊಳ್ಳುತ್ತಿದ್ದ ಪೂರ್ವಿಕರು ಎಲ್ಲವನ್ನು ನಿಸರ್ಗದಲ್ಲಿಯೇ ಕಾಣುತ್ತಿದ್ದರು. ಪುರಾಣಕ್ಕೆ ಹೋದರೆ ಇಲಿರಾಯ ಗಣೇಶನ ಸವಾರಿ ಮಾಡುವ ವಾಹನ. ಪಾಪ ಮರಿಯ ಇವೆಲ್ಲವನ್ನು ನೋಡುತ್ತಿರಲಿಲ್ಲ. ಹೊಟ್ಟೆ ತುಂಬಿ ರುಚಿ ಸಿಕ್ಕರೆ ಸಾಕು ಯಾವುದಾದರೇನು? ಆ ದೇವರಲ್ಲಿಯೂ ಎರಡು ತರದವುಗಳಲ್ಲವೇ? ಒಂದು ಸಿಹಿ ದೇವರು, ಇನ್ನೊಂದು ಖಾರ ದೇವರು. ಹೀಗಿರುವಾಗ ನಾವ್ ತಿನ್ನುವುದರಲ್ಲಿ ಅದ್ಯಾವ ಪಾಪ ಇರಬಹುದು ಎಂದು ತನಗೇ ತಾನೇ ಸಮರ್ಥನೆ ಮಾಡಿಕೊಳ್ಳುತ್ತಿದ್ದ. ಈಗ ಬೇಟೆಗಳೆಲ್ಲ ನಿಷಿದ್ಧವಾಗಿರುವಾಗ ಅಂದಿನ ಜನರು ಪಾಪ ಪುಣ್ಯಗಳಿಗಿಂತಲೂ ಹೊಟ್ಟೆ ತುಂಬಿದರೆ ಸಾಕು ಅದೇ ಮುಖ್ಯ ಎನ್ನುವುದಾಗಿತ್ತು. ಬೇಟೆ ನಮ್ಮ ಸಂಸ್ಕೃತಿಯ ಒಂದು ಭಾಗವಾಗಿತ್ತು. ಪ್ರಾಣಿಗಳು ಈಗಲೂ ಒಂದನ್ನೊಂದು ಬೇಟೆಯಾಡಿಯೇ ಬದುಕುತ್ತಿವೆ. ಹೀಗಿರುವಾಗ ‘ಬೇಟೆಯಾಡೋದು ನೋಡು, ಕೋಟೆ ಹತ್ತೋದು ನೋಡು’ ಎಂಬ ಮಾತು ವಿಶಿಷ್ಟ ಆಲೋಚನೆಯದ್ದು.

ಕೆಲವು ವರ್ಷಗಳ ಹಿಂದೆ ಮಳೆ ಇಲ್ಲದೆ ನಮ್ಮ

